## ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಕಮಲ್‌ಪಂತ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ

ವಿಷಯ: ಬೆಂಗಳೂರು ನಗರ ವ್ಯಾಪ್ತಿಯ ವಾಯುಸೇನಾ ನೆಲೆಯಲ್ಲಿ ದಿನಾಂಕ: 03-02-2021 ರಿಂದ 05-02-2021 ರವರೆಗೆ ಏರೋ ಇಂಡಿಯಾ-2021 ಪ್ರಯುಕ್ತ ಕೆಲವು ರಸ್ತೆಗಳಲ್ಲಿ ಸಂಚಾರ ನಿರ್ಬಂಧ, ನಿಲುಗಡೆ ನಿಷೇಧ, ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸುವ ಬಗ್ಗೆ

ಉಲ್ಲೇಖ:
1. ಪಿಐ, ಯಲಹಂಕ ಸಂಚಾರ ಪೊಲೀಸ್ ಠಾಣೆ ರವರ ಪ್ರಸ್ತಾವನೆ ದಿನಾಂಕ: 25-01-2021
2. ಎಸಿಪಿ ಸಂಚಾರ ಈಶಾನ್ಯ ಉಪ ವಿಭಾಗ ರವರ ಟಿಪ್ಪಣಿ ಷರಾ ದಿನಾಂಕ 25-01-2021
3. ಡಿಸಿಪಿ ಸಂಚಾರ ಉತ್ತರ ವಿಭಾಗ ರವರ ಟಿಪ್ಪಣಿ ಷರಾ ದಿನಾಂಕ: 25-01-2021
4. ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಟಿಪ್ಪಣಿ ಷರಾ ದಿನಾಂಕ: 27-01-2021

---

### ಪ್ರಸ್ತಾವನೆ:

ಬೆಂಗಳೂರು ನಗರ ಸಂಚಾರ ವಿಭಾಗದ ಪಿಐ, ಯಲಹಂಕ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಈಶಾನ್ಯ ಉಪ ವಿಭಾಗ, ಉಪ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ವಿಭಾಗ ಮತ್ತು ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರು ಉಲ್ಲೇಖಿತ ವರದಿಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಬೆಂಗಳೂರು ನಗರ ವ್ಯಾಪ್ತಿಯ ಯಲಹಂಕ ವಾಯುಸೇನಾ ನೆಲೆಯಲ್ಲಿ ದಿನಾಂಕ: 03-02-2021 ರಿಂದ ದಿನಾಂಕ: 05-02-2021ರವರೆಗೆ ಪ್ರತಿಷ್ಠಿತ ಏರೋ ಇಂಡಿಯಾ -2021 ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ದಿನಾಂಕ: 03-02-2021 ರ ಬೆಳಿಗ್ಗೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ನಡೆಯಲಿದ್ದು ಈ ಕಾರ್ಯಕ್ರಮಕ್ಕೆ ಘನತೆವೆತ್ತ ರಾಷ್ಟ್ರಪತಿಯವರು, ಮಾನ್ಯ ಪ್ರಧಾನಮಂತ್ರಿಗಳು ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಗಣ್ಯಾತಿಗಣ್ಯ ವ್ಯಕ್ತಿಗಳು, ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ.

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭವಾದ ಬಳಿಕ ಬೆಂಗಳೂರು-ಬಳ್ಳಾರಿ ರಸ್ತೆಯಲ್ಲಿ ವಾಹನ ದಟ್ಟಣೆ ಅಧಿಕವಾಗಿರುತ್ತದೆ. ಈ ವಾಹನ ದಟ್ಟಣೆ ಜೊತೆಗೆ ಏರೋ ಇಂಡಿಯಾ-2021 ಪ್ರದರ್ಶನವನ್ನು ವೀಕ್ಷಿಸಲು ಅಧಿಕ ಸಂಖ್ಯೆಯಲ್ಲಿ ಸಾರ್ವಜನಿಕರು ವಾಹನಗಳಲ್ಲಿ ಬರುವುದರಿಂದ ಈ ರಸ್ತೆಯಲ್ಲಿ ವಾಹನ ದಟ್ಟಣೆ

ಉಲ್ಬಣಗೊಂಡು ಸಾರ್ವಜನಿಕ ಸುಗಮ ಸಂಚಾರಕ್ಕೆ ತೊಂದರೆಯಾಗುವುದನ್ನು ತಪ್ಪಿಸುವ ಸಲುವಾಗಿ ಹಾಗೂ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಮೇಲ್ಕಂಡ ದಿನಗಳಂದು ಸಾರ್ವಜನಿಕ ಸುಗಮ ಸಂಚಾರಕ್ಕೆ ಹೆಬ್ಬಾಳ ಮೇಲುಸೇತುವೆಯಿಂದ ಎಂ.ವಿ.ಐ.ಟಿ ಗೇಟ್‌ವರೆಗೆ ತಾತ್ಕಾಲಿಕವಾಗಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಹಾಗೂ ಇನ್ನಿತರೆ ಸಂಚಾರ ಮಾರ್ಪಾಡುಗಳನ್ನು ಜಾರಿಗೊಳಿಸಿ ಅಧಿಸೂಚನೆ ಹೊರಡಿಸಲು ಮನವಿ ಮಾಡಿರುತ್ತಾರೆ.

ಆದ್ದರಿಂದ ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯಲ್ಲಿ ನಡೆಯಲಿರುವ ಏರೋ ಇಂಡಿಯಾ -2021 ಪ್ರದರ್ಶನಕ್ಕೆ ಘನತೆವೆತ್ತ ರಾಷ್ಟ್ರಪತಿಯವರು, ಮಾನ್ಯ ಪ್ರಧಾನಮಂತ್ರಿಗಳು ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಗಣ್ಯಾತಿಗಣ್ಯ ವ್ಯಕ್ತಿಗಳ ಭೇಟಿ ಹಿನ್ನೆಲೆಯಲ್ಲಿ ಭದ್ರತಾ ದೃಷ್ಟಿಯಿಂದ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಕೆಲವು ರಸ್ತೆಗಳಲ್ಲಿ ಸಂಚಾರ ನಿರ್ಬಂದ, ನಿಲುಗಡೆ ನಿಷೇಧ, ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಿ ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ.

<u>ಆದೇಶ ಸಂಖ್ಯೆ 03/ಅಧಿಸೂಚನೆ/ಜಂಟಿ.ಸಿಪಿ(ಸಂ)/2021 ದಿನಾಂಕ: ೨8-01-2021</u>

ಈ ದಿಸೆಯಲ್ಲಿ ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಮಲ್ ಪಂತ್, ಐ.ಪಿ.ಎಸ್. ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಏಕಮುಖ ಸಂಚಾರ. ವಾಹನ ನಿಲುಗಡೆ ನಿಷೇಧ ಹಾಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಾಗೂ ವೈಮಾನಿಕ ಪ್ರದರ್ಶನದ ವಾಹನ ನಿಲುಗಡೆ ಸ್ಥಳಗಳಿಗೆ ಸಾಗಲು ಮಾರ್ಗಗಳನ್ನು ಕಲ್ಪಿಸಿ ಆದೇಶಿಸಿರುತ್ತೇನೆ.

I. <u>ಏಕಮುಖ ಸಂಚಾರ ವ್ಯವಸ್ಥೆ:</u>

1. ಬೆಂಗಳೂರು-ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದಿಂದ ಸಾದಹಳ್ಳಿ ಗೇಟ್‌ವರೆಗೆ ಎರಡೂ ಭಾಗದ ಸರ್ವೀಸ್ ರಸ್ತೆಗಳನ್ನು ಏಕಮುಖ ಸಂಚಾರ ಮಾರ್ಗವಾಗಿ ಮಾರ್ಪಡಿಸಿದೆ.
2. ಬೆಂಗಳೂರು-ಬಳ್ಳಾರಿ ರಸ್ತೆಯ ಆಂಬಿಯನ್ಸ್ ಡಾಬಾ ಕ್ರಾಸ್‌ನಿಂದ ಏ.ಎ.ಎಫ್ ಗೇಟ್-8 ರವರೆಗೆ (ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆ) ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.
3. ಬಾಗಲೂರು ಮುಖ್ಯ ರಸ್ತೆಯ ರೇವಾ ಕಾಲೇಜ್ ಜಂಕ್ಷನ್‌ನಿಂದ ಬಾಗಲೂರು ಕ್ರಾಸ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ನಿಷೇಧಿಸಿದೆ.
4. ಚಿಕ್ಕಜಾಲ-ಮೈಲನಹಳ್ಳಿ ಮುಖ್ಯ ರಸ್ತೆಯಲ್ಲಿ ಏರ್‌ಪೋರ್ಟ್ ಬ್ಯಾರ್‌ಗೇಟ್‌ನಿಂದ (ಬೇಗೂರು ಪವರ್ ಸ್ಟೇಷನ್‌ನಿಂದ) ಚಿಕ್ಕಜಾಲ ಕಡೆಗೆ ಬರುವ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

5. ಹುಣಸಮಾರನಹಳ್ಳಿ ಮುಖ್ಯ ರಸ್ತೆಯಲ್ಲಿ ಐ.ಎ.ಎಫ್ ಮಂದಿರ ಗೇಟ್‌ನಿಂದ ಬಿ.ಬಿ. ರಸ್ತೆ ಹುಣಸಮಾರನಹಳ್ಳಿ ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

## II. ಸಂಚಾರ ನಿರ್ಬಂಧ ಹಾಗೂ ಪರ್ಯಾಯ ಮಾರ್ಗಗಳು:

- ಬೆಂಗಳೂರು – ಬಳ್ಳಾರಿ ರಸ್ತೆಯಲ್ಲಿ ಹೆಬ್ಬಾಳ ಫ್ಲೈಓವರ್‌ನಿಂದ ಸಾದಹಳ್ಳಿಗೇಟ್ ವರೆಗೆ ಗಣ್ಯ ವ್ಯಕ್ತಿಗಳ ವಾಹನಗಳು, ತುರ್ತು ಸೇವಾ ವಾಹನಗಳು, ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ ಬಸ್ಸುಗಳು, ಏರೋ ಇಂಡಿಯಾಗೆ ಆಗಮಿಸುವ ಪಾಸ್ ಹೊಂದಿರುವವರ ವಾಹನಗಳನ್ನು ಹೊರತುಪಡಿಸಿ, ಹೆಬ್ಬಾಳ ಫ್ಲೈಓವರ್ ಕಡೆಯಿಂದ ಸಾದಹಳ್ಳಿ ಕಡೆಗೆ ಎರಡೂ ದಿಕ್ಕಿನಲ್ಲಿ ಎಲ್ಲಾ ವಿಧದ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.
- ಕಲ್ಪಿಸಿರುವ ಪರ್ಯಾಯ ಮಾರ್ಗಗಳು:

| ದಿಕ್ಕುಗಳು | ಕೆಂಪೇಗೌಡ ಅಂ.ರಾ.ವಿಮಾನ ನಿಲ್ದಾಣ (KIAL) ಕಡೆಗೆ ಮಾರ್ಗ | ADVA ಪಾರ್ಕಿಂಗ್ ಕಡೆಗೆ | Domestic ಪಾರ್ಕಿಂಗ್ ಕಡೆಗೆ |
|---|---|---|---|
| ಬೆಂಗಳೂರು ಪೂರ್ವ ಕಡೆಯಿಂದ (ವೈಟ್‌ಫೀಲ್ಡ್, ಕೆ.ಆರ್.ಪುರಂ, ಬಾಣಸವಾಡಿ ಇತರೆ ಕಡೆಗಳಿಂದ) | ಕೆ.ಆರ್.ಪುರಂ – ಹೆಣ್ಣೂರು ಕ್ರಾಸ್ – ಬಾಗಲೂರು – ಮೈಲನಹಳ್ಳಿ – ಬೇಗೂರು – ನೈರುತ್ಯ ಪ್ರವೇಶದ್ವಾರ – KIAL | ಕೆ.ಆರ್. ಪುರಂ – ನಾಗವಾರ ಫ್ಲೈಓವರ್ – ವೀರಣ್ಣಪಾಳ್ಯ ಫ್ಲೈಓವರ್– ಹೆಬ್ಬಾಳ ಸರ್ಕಲ್ – ಬಲತಿರುವು – ಕೆಂಪಾಪುರ – ಸಂಜೀವಿನಿ ನಗರ ಕ್ರಾಸ್– ಸರ್ವೀಸ್ ರಸ್ತೆ – ಕೊಡಿಗೇಹಳ್ಳಿ –ಬ್ಯಾಟರಾಯನಪುರ – ಯಲಹಂಕ ರೈತರ ಸಂತೆ – ಕೋಗಿಲು ಕ್ರಾಸ್ – ಸರ್ವೀಸ್ ರಸ್ತೆ – ಅಂಬಿಯನ್ಸ್ ಡಾಬಾ – ಎಡತಿರುವು – ನಿಟ್ಟೆ ಮೀನಾಕ್ಷಿ ಕಾಲೇಜ್ ರಸ್ತೆ – ADVA ಪಾರ್ಕಿಂಗ್ | ಕೆ.ಆರ್. ಪುರಂ – ನಾಗವಾರ ಫ್ಲೈಓವರ್ – ವೀರಣ್ಣಪಾಳ್ಯ ಫ್ಲೈಓವರ್– ಹೆಬ್ಬಾಳ ಸರ್ಕಲ್ – ಬಲತಿರುವು – ಕೆಂಪಾಪುರ ಕ್ರಾಸ್ – ಕೊಡಿಗೇಹಳ್ಳಿ ಫ್ಲೈ ಓವರ್ – ಕಾಫೀ ಡೇ – ಐ.ಎ.ಎಫ್ ಗೇಟ್ – ಹುಣಸಮಾರನಹಳ್ಳಿ ಸರ್ವೀಸ್ ರಸ್ತೆ – ಹುಣಸ ಮಾರನಹಳ್ಳಿ – 'ಯು' ತಿರುವು – Domestic ಪಾರ್ಕಿಂಗ್ ಏರಿಯಾ |
| ಬೆಂಗಳೂರು ಪಶ್ಚಿಮ ಮತ್ತು ಉತ್ತರ ಕಡೆಯಿಂದ (ಕೆಂಗೇರಿ, ರಾಜಾಜಿ ನಗರ, ಯಶವಂತ ಪುರ ಇತರೆ ಕಡೆಗಳಿಂದ) | ಗೊರಗುಂಟೆಪಾಳ್ಯ – ಬಿ.ಇ.ಎಲ್ ವೃತ್ತ – ಗಂಗಮ್ಮ ವೃತ್ತ – ಮದರ್ ಡೈರಿ – ಉನ್ನಿ ಕೃಷ್ಣನ್ ಜಂಕ್ಷನ್ – ದೊಡ್ಡಬಳ್ಳಾಪುರ ರಸ್ತೆ – ರಾಜಾನುಕುಂಟೆ – ಅದಿಗಾನಹಳ್ಳಿ – ಎಂ.ವಿ.ಐ.ಟಿ ಕ್ರಾಸ್ – ವಿದ್ಯಾನಗರ ಕ್ರಾಸ್ – KIAL | ಗೊರಗುಂಟೆಪಾಳ್ಯ ರಿಂಗ್ ರಸ್ತೆ – ಬಿ.ಇ.ಎಲ್ ವೃತ್ತ – ಭದ್ರಪ್ಪ ಲೇಔಟ್ – ಹೆಬ್ಬಾಳ ಸರ್ಕಲ್ – ಎಡ ತಿರುವು – ಕೆಂಪಾಪುರ ಕ್ರಾಸ್ ಸರ್ವೀಸ್ ರಸ್ತೆ – ಕಾಫೀ ಡೇ ಸರ್ವೀಸ್ ರಸ್ತೆ – ಅಂಬಿಯನ್ಸ್ ಡಾಬಾ–ಎಡ ತಿರುವು – ನಿಟ್ಟೆ ಮೀನಾಕ್ಷಿ ಕಾಲೇಜ್ ರಸ್ತೆ – ಐ.ಎ.ಎಫ್ ಗೇಟ್ – 8 – ADVA ಪಾರ್ಕಿಂಗ್ | ಗೊರಗುಂಟೆಪಾಳ್ಯ – ಬಿ.ಇ. ಎಲ್ ವೃತ್ತ – ಭದ್ರಪ್ಪ ಲೇಔಟ್ – ಹೆಬ್ಬಾಳ ಸರ್ಕಲ್ – ಬಲತಿರುವು – ಕೆಂಪಾಪುರ ಕ್ರಾಸ್ – ಕೊಡಿಗೇಹಳ್ಳಿ ಫ್ಲೈ ಓವರ್ – ಕಾಫೀ ಡೇ – ಐ.ಎ.ಎಫ್ ಗೇಟ್ – ಹುಣಸಮಾರನಹಳ್ಳಿ ಸರ್ವೀಸ್ ರಸ್ತೆ – ಹುಣಸ ಮಾರನಹಳ್ಳಿ – 'ಯು' ತಿರುವು – Domestic ಪಾರ್ಕಿಂಗ್ ಏರಿಯಾ |

| | | | |
|---|---|---|---|
| ಬೆಂಗಳೂರು ದಕ್ಷಿಣ ಕಡೆಯಿಂದ (ಕೋರಮಂಗಲ, ಜಯನಗರ, ಜೆ.ಪಿ. ನಗರ) | ಮೈಸೂರು ರಸ್ತೆ - ನಾಯಂಡನಹಳ್ಳಿ - ಗೊರಗುಂಟೆಪಾಳ್ಯ - ಬಿ.ಇ.ಎಲ್ ವೃತ್ತ - ಗಂಗಮ್ಮ ವೃತ್ತ - ಮದರ್ ಡೈರಿ - ಉನ್ನಿ ಕೃಷ್ಣನ್ ಜಂಕ್ಷನ್ - ದೊಡ್ಡಬಳ್ಳಾಪುರ ರಸ್ತೆ - ರಾಜಾನುಕುಂಟೆ - ಆದಿಗಾನಹಳ್ಳಿ - ಎಂ.ವಿ.ಐ.ಟಿ ಕ್ರಾಸ್ - ವಿದ್ಯಾನಗರ ಕ್ರಾಸ್ - KIAL | ಮೈಸೂರು ರಸ್ತೆ - ನಾಯಂಡನಹಳ್ಳಿ - ಗೊರಗುಂಟೆಪಾಳ್ಯ ರಿಂಗ್ ರಸ್ತೆ - ಬಿ.ಇ.ಎಲ್ ವೃತ್ತ - ಭದ್ರಪ್ಪ ಲೇಔಟ್ - ಹೆಬ್ಬಾಳ ಸರ್ಕಲ್ - ಎಡ ತಿರುವು -- ಕೆಂಪಾಪುರ ಕ್ರಾಸ್ ಸರ್ವೀಸ್ ರಸ್ತೆ -- ಕಾಫೀ ಡೇ ಸರ್ವೀಸ್ ರಸ್ತೆ - ಅಂಬಿಯನ್ಸ್ ಡಾಬಾ -ಎಡ ತಿರುವು - ನಿಟ್ಟೆ ಮೀನಾಕ್ಷಿ ಕಾಲೇಜ್ ರಸ್ತೆ - ಐ.ಎ.ಎಫ್ ಗೇಟ್ - 8 - ADVA ಪಾರ್ಕಿಂಗ್ | ಮೈಸೂರು ರಸ್ತೆ - ನಾಯಂಡನಹಳ್ಳಿ - ಗೊರಗುಂಟೆಪಾಳ್ಯ - ಬಿ.ಇ.ಎಲ್ ವೃತ್ತ -- ಭದ್ರಪ್ಪ ಲೇಔಟ್ - ಹೆಬ್ಬಾಳ ಸರ್ಕಲ್ - ಬಲತಿರುವು - ಕೆಂಪಾಪುರ ಕ್ರಾಸ್ ಫ್ಲೈ ಓವರ್ - ಕಾಫೀ ಡೇ ಫ್ಲೈ ಓವರ್ - ಹುಣಸಮಾರನ ಹಳ್ಳಿ ಫ್ಲೈ ಓವರ್ ಸರ್ವೀಸ್ ರಸ್ತೆ - ಹುಣಸ ಮಾರನಹಳ್ಳಿ - 'ಯು' ತಿರುವು - Domestic ಪಾರ್ಕಿಂಗ್ |

III. ಲಾರಿ, ಟ್ರಕ್, ಖಾಸಗಿ ಬಸ್ಸುಗಳು ಹಾಗೂ ಇತರೆ ಭಾರೀ ಸರಕು ಸಾಗಾಣಿಕೆಯ ವಾಹನಗಳ ನಿಷೇಧ:

- ಬೆಂಗಳೂರು-ಬಳ್ಳಾರಿ ರಸ್ತೆಯಲ್ಲಿ, ಮೇಖ್ರಿ ವೃತ್ತದಿಂದ-ಎಂ.ವಿ.ಐ.ಟಿ. ಗೇಟ್ ವರೆಗೆ ಮತ್ತು ಸಾದಹಳ್ಳಿ ಗೇಟ್ ನಿಂದ ಮೇಖ್ರಿ ವೃತ್ತದವರೆಗೆ ಎರಡೂ ದಿಕ್ಕಿನಲ್ಲಿ ಸಂಚರಿಸುವ (ಬಿ.ಎಂ.ಟಿ.ಸಿ. ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ಹೊರತುಪಡಿಸಿ) ಲಾರಿ, ಟ್ರಕ್, ಖಾಸಗಿ ಬಸ್ಸುಗಳು ಹಾಗೂ ಇತರೆ ಭಾರೀ ಸರಕು ಸಾಗಾಣಿಕೆಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.
- ಗೊರಗುಂಟೆ ಪಾಳ್ಯದಿಂದ ಹೆಬ್ಬಾಳ ಮಾರ್ಗವಾಗಿ ಹೆಣ್ಣೂರು ಕ್ರಾಸ್‌ವರೆಗೆ ಎರಡೂ ದಿಕ್ಕಿನಲ್ಲಿ ಸಂಚರಿಸುವ (ಬಿ.ಎಂ.ಟಿ.ಸಿ. ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ಹೊರತುಪಡಿಸಿ) ಲಾರಿ, ಟ್ರಕ್, ಖಾಸಗಿ ಬಸ್ಸುಗಳು ಹಾಗೂ ಇತರ ಭಾರೀ ಸರಕು ಸಾಗಾಣಿಕೆಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.
- ನಾಗವಾರ ಜಂಕ್ಷನ್‌ನಿಂದ ಥಣಿಸಂದ್ರ ಮುಖ್ಯ ರಸ್ತೆ ಮಾರ್ಗವಾಗಿ ಬಾಗಲೂರು ಮುಖ್ಯ ರಸ್ತೆ ರೇವಾ ಕಾಲೇಜ್ ಜಂಕ್ಷನ್‌ವರೆಗೆ ಎರಡೂ ದಿಕ್ಕಿನಲ್ಲಿ ಸಂಚರಿಸುವ (ಬಿ.ಎಂ.ಟಿ.ಸಿ. ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ಹೊರತುಪಡಿಸಿ) ಲಾರಿ, ಟ್ರಕ್, ಖಾಸಗಿ ಬಸ್ಸುಗಳು ಹಾಗೂ ಇತರೆ ಭಾರೀ ಸರಕು ಸಾಗಾಣಿಕೆಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.
- ಬೆಂಗಳೂರು ತುಮಕೂರು ರಸ್ತೆಯ ಗೊರಗುಂಟೆಪಾಳ್ಯ, ಹೆಸರಘಟ್ಟ ತೋಟಗೆರೆ ಬಸವಣ್ಣ ದೇವಸ್ಥಾನ ಮತ್ತು ಚಿಕ್ಕಬಾಣಾವರ ಸರ್ಕಲ್ ಕಡೆಯಿಂದ ಬೆಂಗಳೂರು ನಗರದ ಕಡೆಗೆ ಸಂಚರಿಸುವ (ಬಿ.ಎಂ.ಟಿ.ಸಿ ಬಸ್‌ಗಳನ್ನು ಹೊರತುಪಡಿಸಿ) ಲಾರಿ, ಟ್ರಕ್, ಖಾಸಗಿ ಬಸ್ಸುಗಳು ಹಾಗೂ ಇತರೆ ಭಾರೀ ಸರಕು ಸಾಗಾಣಿಕೆಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

ನಿಷೇಧಿಸಲಾದ ಸಂಚಾರಕ್ಕೆ ಪರ್ಯಾಯ ಮಾರ್ಗ:

- ಹೈದರಾಬಾದ್ ಮತ್ತು ಚಿಕ್ಕಬಳ್ಳಾಪುರ ಕಡೆಗಳಿಂದ ಬೆಂಗಳೂರು ನಗರಕ್ಕೆ ಬರುವ ಲಾರಿ, ಟ್ರಕ್, ಖಾಸಗಿ ಬಸ್ಸುಗಳು ಹಾಗೂ ಇತರೆ ಸರಕು ಸಾಗಾಣಿಕೆಯ ಭಾರೀ ವಾಹನಗಳಿಗೆ ದೇವನಹಳ್ಳಿ

ದೊಡ್ಡಬಳ್ಳಾಪುರ - ದಾಬಸ್‌ಪೇಟೆ - ನೆಲಮಂಗಲ ಮೂಲಕ ಬೆಂಗಳೂರು ನಗರಕ್ಕೆ ಸಂಚರಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಬರುವ ವಾಹನಗಳಿಗೆ ಪರ್ಯಾಯ ಮಾರ್ಗ

- ಹೈದರಾಬಾದ್ ಮತ್ತು ಚಿಕ್ಕಬಳ್ಳಾಪುರ ಕಡೆಗಳಿಂದ ಕೆ.ಆರ್. ಪುರಂ ಮೂಲಕ ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳು ದೇವನಹಳ್ಳಿಯಿಂದ ಸೂಲಿಬೆಲೆ - ಬೂದಿಗೆರೆ - ಕೆ.ಆರ್. ಪುರಂ ಮೂಲಕ ಸಂಚರಿಸಲು ಅನುವು ಮಾಡಿಕೊಡಲಾಗಿದೆ.

- ತುಮಕೂರು ರಸ್ತೆ ಗೊರಗುಂಟೆಪಾಳ್ಯ ಕಡೆಯಿಂದ ನಗರ ಪ್ರವೇಶಿಸುವ ಭಾರೀ ಸರಕು ವಾಹನಗಳು ಸಿ.ಎಂ.ಟಿ.ಐ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ರಿಂಗ್ ರಸ್ತೆಯಲ್ಲಿ ಎಫ್.ಟಿ.ಐ ಫ್ಲೈಓವರ್ ಮೂಲಕ ಸುಮನಹಳ್ಳಿ ಮಾರ್ಗವಾಗಿ ನಾಯಂಡಹಳ್ಳಿ ಸರ್ಕಲ್ ಮೂಲಕ ಮತ್ತು ನೈಸ್ ರಸ್ತೆಯಿಂದ ಕನಕಪುರ ರಸ್ತೆ ಮೂಲಕ ಸಾಗಲು ವ್ಯವಸ್ಥೆ ಕಲ್ಪಿಸಲಾಗಿದೆ.

- ತೋಟಗೆರೆ ಬಸವಣ್ಣ ದೇವಸ್ಥಾನ ಜಂಕ್ಷನ್‌ನಿಂದ ನಗರ ಪ್ರವೇಶಿಸುವ ವಾಹನಗಳು ದೊಡ್ಡಬಳ್ಳಾಪುರ ಕಡೆಯಿಂದ ಹೊಸಕೋಟೆ ಕಡೆ ತೆರಳಬಹುದಾಗಿದೆ. ನೆಲಮಂಗಲ ಕಡೆಯಿಂದ ಸೊಂಡೆಕೊಪ್ಪ ಮಾರ್ಗವಾಗಿ ನೈಸ್ ರಸ್ತೆ ತಲುಪಲು ಅನುವು ಮಾಡಿಕೊಡಲಾಗಿದೆ.

- ಚಿಕ್ಕಬಾಣಾವರ ಜಂಕ್ಷನ್‌ನಿಂದ ನಗರ ಪ್ರವೇಶಿಸುವ ವಾಹನಗಳು ವಾಪಸ್ಸು 'ಯು' ತಿರುವು ಪಡೆದು ತೋಟಗೆರೆ ಬಸವಣ್ಣ ದೇವಸ್ಥಾನ ಜಂಕ್ಷನ್‌ನಿಂದ ದೊಡ್ಡಬಳ್ಳಾಪುರ ಕಡೆಯಿಂದ ಹೊಸಕೋಟೆ ಕಡೆ ತೆರಳಬಹುದಾಗಿದೆ. ನೆಲಮಂಗಲ ಕಡೆಯಿಂದ ಸೊಂಡೆಕೊಪ್ಪ ಮಾರ್ಗವಾಗಿ ನೈಸ್ ರಸ್ತೆ ತಲುಪಲು ಅನುವು ಮಾಡಿಕೊಡಲಾಗಿದೆ.

## IV. <u>ವಾಹನ ನಿಲುಗಡೆ ನಿಷೇಧ:</u>

- ದೊಡ್ಡಬಳ್ಳಾಪುರ ಮುಖ್ಯ ರಸ್ತೆಯ ನಾಗೇನಹಳ್ಳಿ ಗೇಟ್‌ನಿಂದ ಗಂಟಿಗಾನಹಳ್ಳಿ ಮೂಲಕ ಬಿ.ಬಿ. ರಸ್ತೆಯ ಬಾಗಲೂರು ಕ್ರಾಸ್‌ನ ಆಂಬಿಯನ್ಸ್ ಡಾಬಾ ಕ್ರಾಸ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

- ಬೆಂಗಳೂರು-ಬಳ್ಳಾರಿ ರಸ್ತೆ: ಮೇಖ್ರಿ ವೃತ್ತದಿಂದ ಸಾದಹಳ್ಳಿ ಗೇಟ್‌ವರೆಗೆ ಮತ್ತು ಸಾದಹಳ್ಳಿ ಗೇಟ್‌ನಿಂದ ಮೇಖ್ರಿ ವೃತ್ತದವರೆಗೆ ಎರಡೂ ಬದಿಯ ಸರ್ವೀಸ್ ರಸ್ತೆಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

- ರಿಂಗ್ ರಸ್ತೆಯ ಗೊರಗುಂಟೆಪಾಳ್ಯ ಜಂಕ್ಷನ್‌ನಿಂದ ಹೆಣ್ಣೂರು ಕ್ರಾಸ್ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇದಿಸಲಾಗಿದೆ.

- ಬಾಗಲೂರು ಮುಖ್ಯ ರಸ್ತೆಯ ರೇವಾ ಕಾಲೇಜ್ ಜಂಕ್ಷನ್‌ನಿಂದ ಬಾಗಲೂರು ಕ್ರಾಸ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇದಿಸಲಾಗಿದೆ.

- ನಾಗವಾರ ಜಂಕ್ಷನ್‌ನಿಂದ ಬಾಗಲೂರು ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇದಿಸಲಾಗಿದೆ.

- ಬೆಂಗಳೂರು-ಬಳ್ಳಾರಿ ರಸ್ತೆ: ಹುಣಸಮಾರನಹಳ್ಳಿ ಜಂಕ್ಷನ್‌ನಿಂದ ಕೊಡಗಲಹಟ್ಟಿಯವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇದಿಸಲಾಗಿದೆ.

V. ಕಾಂಟ್ರಾ-ಫ್ಲೋ ಸಂಚಾರ ವ್ಯವಸ್ಥೆ

- ಬೆಂಗಳೂರು ಬಳ್ಳಾರಿ ರಸ್ತೆಯ ಯಲಹಂಕ ಕಾಫಿ ಡೇ ಜಂಕ್ಷನ್‌ನಿಂದ ಇಂಡಿಯನ್ ಏರ್‌ಫೋರ್ಸ್ (IAF) ಗೇಟ್ ನಂ.2ಎ ವರೆಗೆ ಅತಿಗಣ್ಯ ವ್ಯಕ್ತಿಗಳ ಸುಗಮ ಸಂಚಾರ ವ್ಯವಸ್ಥೆಗೆ ಮೀಡಿಯನ್ ತೆರವುಗೊಳಿಸಿ ಎದುರು ರಸ್ತೆಯ ಬಲಭಾಗದ ಒಂದು ಪಥವನ್ನು ಮೀಸಲಿಟ್ಟು (Contra flow) ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಕಲ್ಪಿಸಲಾಗಿದೆ.

ಅಂತೆಯೇ ಕಲಂ 116 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ 4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡ ವ್ಯವಸ್ಥೆಯನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಅಧಿಕಾರಿಗಳಿಗೆ ಆದೇಶಿಸಿರುತ್ತೇನೆ.

ಈ ಮೇಲ್ಕಂಡ ಮಾರ್ಪಾಡುಗಳು ದಿನಾಂಕ: 03-02-2021 ರಿಂದ ದಿನಾಂಕ: 05-02-2021 ರವರೆಗೆ ಪ್ರತಿ ದಿವಸ ಬೆಳಿಗ್ಗೆ 05:00 ಗಂಟೆಯಿಂದ ರಾತ್ರಿ 10:00 ಗಂಟೆಯವರೆಗೆ ಮಾತ್ರ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ [illegible]

28/1

(ಕಮಲ್ ಪಂತ್)
ಪೊಲೀಸ್ ಕಮೀಷನರ್,
ಬೆಂಗಳೂರು ನಗರ.

**ಕಮಲ್ ಪಂತ್ ಭಾ.ಪೊ.ಸೇ.**
**ಪೊಲೀಸ್ ಆಯುಕ್ತರು**
**ಬೆಂಗಳೂರು ನಗರ**

ಗೆ,

1. ಸಂಕಲನಾಧಿಕಾರಿಗಳು (Compiler), ಕರ್ನಾಟಕ ರಾಜ್ಯ ಪ್ರಪತ್ರ, ಬೆಂಗಳೂರು ರವರು ಈ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಕೋರಲಾಗಿದೆ.

2. ಸಂಬಂಧಪಟ್ಟವರಿಗೆ